## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

ದಿನಾಂಕ 21 ನೇ ಅಕ್ಟೋಬರ್ ಮಾಹೆ 2025ನೇ ಇಸವಿ

**ಸಿ.ಸಿ.ನಂ. 907/2025**

ವಿಕಾಸ್ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ,
1ನೇ ಅಂತಸ್ತು, ಎಸ್.ಜೆ. ಆರ್ಕೇಡ ಕಟ್ಟಡ, ಮುಖ್ಯ ರಸ್ತೆ, ಕಾರ್ಕಳ,
ಕಾರ್ಕಳ ಕಸಬಾ ಗ್ರಾಮ,
ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ,
ಪ್ರತಿನಿಧಿಸುವವರುಃ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್,
ಶ್ರೀನಿವಾಸ್ ಕಾರ್ಲ,
ಪ್ರಾಯಃ 47 ವರ್ಷಗಳು,
ತಂದೆಃ ದಿ. ಮಹಾಬಲ,
ವಾಸಃ ಕಾರ್ಕಳ ಕಸಬಾ ಗ್ರಾಮ,
ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ, ... ಪಿರ್ಯಾಧಿದಾರರು

- ವಿರುದ್ಧ -

ಪಾಲಿನಿ,
ಪ್ರಾಯಃ 37 ವರ್ಷಗಳು,
ಗಂಡಃ ನಿಖಿಲ್ ಕುಮಾರ್,
ವಾಸಃ ನಂಃ1-24/6, ಕೊಕಿನಿಕಿ ಕಾಂಪೌಂಡ್ ,
ಕಾರ್ಕಳ ಕಸಬಾ ಗ್ರಾಮ ಮತ್ತು ಅಂಚೆ,
ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ. .... ಆರೋಪಿ

## ಆಪಾದನೆಯ ಸಾರಾಂಶ

ಆರೋಪಿಯಾದ ನೀವು ಪಿರ್ಯಾದಿ ಸಂಸ್ಥೆಯಾದ ವಿಕಾಸ್ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ರವರಿಂದ ಸಾಲವನ್ನು ಪಡೆದುಕೊಂಡಿದ್ದು, ಅದರ ಮರುಪಾವತಿಸುವ ಸಲುವಾಗಿ ದಿನಾಂಕ 13.06.2025 ರಂದು ರೂ.1,14,512/- ಗಳಿಗೆ ಬ್ಯಾಂಕ್ ಅಫ್ ಬರೋಡ, ಕಾರ್ಕಳ ಶಾಖೆ ಚೆಕ್ಕು ಸಂಖ್ಯೆ 002722 ನ್ನು ನೀಡಿದ್ದು, ಸದರಿ ಚೆಕ್ಕನ್ನು ದಿನಾಂಕ 16.06.2025 ರಂದು ಫಿರ್ಯಾದಿದಾರರು ನಗದೀಕರಿಸಲು ಫೆಡರಲ್ ಬ್ಯಾಂಕ್, ಕಾರ್ಕಳ ಶಾಖೆಗೆ ಹಾಜರುಪಡಿಸಿದ್ದು, ದಿನಾಂಕ 16.06.2025 ರಂದು ಸದರಿ ಚೆಕ್ಕು ಮಾನ್ಯಗೊಳ್ಳದೆ 'Account closed situation covered in 2125' ಎಂಬ ಹಿಂಬರಹದೊಂದಿಗೆ

ಹಿಂತಿರುಗಿ ಬಂದಿದ್ದು, ಅದರಂತೆ ಪಿರ್ಯಾದಿದಾರರು ದಿಃ 09.07.2025 ರಂದು ವಕೀಲರ ಮೂಲಕ ನೋಟಿಸು ಜಾರಿ ಮಾಡಿ ಸದರಿ ಚೆಕ್ಕಿನ ಹಣವನ್ನು 15 ದಿನಗಳ ಒಳಗೆ ಮರುಪಾವತಿ ಮಾಡುವಂತೆ ಕೇಳಿಕೊಂಡಿದ್ದು, ಸದರಿ ನೋಟಿಸು ನಿಮಗೆ ದಿನಾಂಕ 11.07.2025 ರಂದು ಜಾರಿಯಾಗಿದ್ದು, ಆದರೆ ಇದುವರೆಗೆ ನೀವು ಚೆಕ್ಕಿನ ಬಾಬ್ತು ಹಣವನ್ನು ಪಿರ್ಯಾದಿದಾರರಿಗೆ ನೀಡಿರುವುದಿಲ್ಲ. ಆದುದರಿಂದ ನೀವು ವರ್ಗಾವಣೀಯ ಲಿಖಿತಗಳ ಅಧಿನಿಯಮ ಕಲಂ 138 ಕೆಳಗೆ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವಂತೆ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಪ್ರಶ್ನೆ 1ಃ ಮೇಲೆ ಹೇಳಿದ ಆರೋಪವನ್ನು ಕೇಳಿರುವಿರಾ?

ಉತ್ತರಃ

ಪ್ರಶ್ನೆ 2ಃ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಬಯಸುತ್ತೀರೋ?

ಉತ್ತರಃ

(ಆರೋಪಿಗೆ ಮೇಲಿನ ಆಪಾದನೆಯನ್ನು ಓದಿ ಹೇಳಿ ವಿವರಿಸಿದ್ದು, ಅವರು ಅದನ್ನು ಸರಿಯಾಗಿ ತಿಳಿದುಕೊಂಡು ಉತ್ತರಿಸಿದ್ದಾರೆ ಎಂಬುದಾಗಿ ಈ ಮೂಲಕ ದೃಢೀಕರಿಸುತ್ತೇನೆ.)

ಪ್ರ.ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ.,
ಕಾರ್ಕಳ.